# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## Spl.C.463/2022

ಚಾಸಾಃ 6 ಪ್ರಾಸಾಃ 5

**ದಿನಾಂಕ.15.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ಲಕ್ಷ್ಮಣ ಎಸ್ |
| ಗಂಡ/ ತಂದೆಯ ಹೆಸರು | ಸಿದ್ದಲಿಂಗ ಚಾರ್ |
| ವಯಸ್ಸು | 51 ವರ್ಷ |
| ಕೆಲಸ | ಮೀಟರ್ ರೀಡರ್ , ಬೆಸ್ಕಾಂ ಇಲಾಖೆ |
| ವಾಸಸ್ಥಳ | ಮೇಳೆ ಕೋಟೆ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2015 ರಿಂದ 2019 ರವರಿಗೆ ಬೆಸ್ಕಾಂ ಜಾಗೃತ ಧಳ ತುಮಕೂರಿನಲ್ಲಿ ಲೈನ್ ಮ್ಯಾನ್ ಆಗಿ ಕರ್ತವ್ಯನಿರ್ವಹಿಸಿರುತ್ತೇನೆ.

2) ದಿ 24-09-19 ರಂದು ತುಮಕೂರಿನ ಸಿದ್ದಗಂಗಾ ಬಡಾವಣೆಯ ಸಿದ್ದಗಂಗಾ ಮಹಿಳಾ ಹಾಸ್ಟೇಲ್ ಗೆ ನಾನು ಚಾಸಾ-1 ರವರ ಜೊತೆಗೆ ವಿದ್ಯುತ್ ಕಳ್ಳತನ ಸಂಬಂದಪಟ್ಟ ಆಗೆ ಸ್ಥಳ ಪರಿಶೀಲನೆಗಾಗಿ ಅವರ ಜೊತೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ನಾಗರಾಜು, ಪೊಲೀಸ್ ಇನ್ಸ್ ಪೆಕ್ಟರ್ ಸಹ ಇದ್ದರು. ಆಗ ಚಾಸಾ-1 ರವರು ಸದರಿ ಹಾಸ್ಟೇಲ್ ನ್ನು ಪರಿಶೀಲನೆ ಮಾಡಿದಾಗ ಗ್ರಾಹಕರು ಗೃಹಬಳಕೆ ವಿದ್ಯುತ್ ಸಂಪರ್ಕದಿಂದ

ವಾಣಿಜ್ಯ ಬಳಕೆಗೆ ವಿದ್ಯುತ್ ಬಳಸುತ್ತಿದ್ದಾರೆಂದು ಪರಿಶೀಲಿಸಿರುತ್ತಾರೆ. ಆಗ ನಾನು ಸಹ ಆರ್ ಆರ್ ಸಂಖ್ಯೆಯನ್ನು ನೋಡಲಾಗಿ ಸದರಿ ವಿದ್ಯುತ್ ಸಂಪರ್ಕವು ಗೃಹ ಉಪಯೋಗಕ್ಕೆ ಇತ್ತು. ಸದರಿ ಸ್ಥಳವು ಮಹಿಳಾ ಹಾಸ್ಟೆಲ್ ಆಗಿರುವುದರಿಂದ ಯಾವುದೇ ವಿದ್ಯುತ್ ಕಡಿತ ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಚಾಸಾ-1 ರವರು ಸ್ಥಳ ಪಂಚನಾಮೆಯನ್ನು ಮಾಡಿದ್ದು , ಸ್ಥಳಪಂಚನಾಮೆಯಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸ್ಥಳಪಂಚನಾಮೆಯನ್ನು ನಿಪಿ-2 ಎಂದು ಈಗಾಗಲೇ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಕಟ್ಟಡವು 3 ಹಂತಸ್ತಿನ ಕಟ್ಟಡವಾಗಿದ್ದು ಅದರಲ್ಲಿ 18 ರೂಂಗಳು ಇದ್ದವು. 18 ರೂಂಗಳಲ್ಲಿ ವಿದ್ಯಾರ್ಥಿಗಳು ಇದ್ದರು.

**<u>ಪಾಟೀ ಸವಾಲು 2 ನೇ ಆರೋಪಿಯ ಪರ ಶ್ರೀ ಹೆಚ್ ವಿ ಆರ್ ವಕೀಲರಿಂದಃ</u>**

3) ಪಂಚನಾಮೆಯನ್ನು ನಾಗರಾಜು ಎಂಬ ಪೊಲೀಸ್ ಸಿಬ್ಬಂದಿ ಬರೆದಿರುತ್ತಾರೆ. ಕೋತಿತೋಪಿನಲ್ಲಿ ಪಂಚನಾಮೆಯನ್ನು ಬರೆದುಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ ಅಂದರೆ ಸರಿ. ಎಲ್ ಟಿ -2 ಯಿಂದ ಎಲ್ ಟಿ -3 ಯನ್ನು ಆರೋಪಿತನು ಬಳಸುತ್ತಿದ್ದಾರೆಂದು ತಮ್ಮ ಸಿಬ್ಬಂದಿ

ಹೇಳಿದ್ದರಿಂದ ಗೊತ್ತಾಯಿತು ಅಂದರೆ ಸರಿಯಲ್ಲ. ಹಾಸ್ಟೆಲ್ 3 ಹಂತಸ್ತಿನದು ಮತ್ತು 18 ರೂಂ ಇತ್ತು ಎಂದು ತಮ್ಮ ಸಿಬ್ಬಂದಿ ಹೇಳಿದ್ದರಿಂದ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಹಾಸ್ಟೆಲ್ ನಡೆಸುತ್ತಿರಲಿಲ್ಲ ಮತ್ತು ಯಾವುದೇ ಹೆಣ್ಣು ಮಕ್ಕಳು ವಿದ್ಯಾರ್ಥಿಗಳು ಇರಲಿಲ್ಲ ಅಂದರೆ ಸ ರಿಯಲ್ಲ.

**ಪಾಟೀ ಸವಾಲು 1 ನೇ ಆರೋಪಿಯ ಪರ ಶ್ರೀ ಎನ್ ಸಿ ಜಿ ವಕೀಲರಿಂದಃ**

4) ಸ್ಥಳಪಂಚನಾಮೆಗೆ ಹಾಜರಾಗಲು ನನಗೆ ಯಾವುದೇ ನೋಟೀಸ್ ಕೊಟ್ಟಿರಲಿಲ್ಲ. ಸದರಿ ಸ್ಥಳಪಂಚನಾಮೆಯ ಶಿರೋ ನಾಮೆಯಲ್ಲಿ ತಮ್ಮ ಹೆಸರು ಬರೆದಿಲ್ಲ, ಆದ್ದರಿಂದ ತಮ್ಮ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಠಾಣೆಯಲ್ಲಿ ಸಹಿ ಮಾಡಿದ್ದೀರಿ ಅಂದರೆ ಸರಿಯಲ್ಲ.

(ಉಳಿಕೆ ಪಾಟೀ ಸವಾಲನ್ನು 2 ನೇಆರೋಪಿಪರ ವಕೀಲರು ಮಾಡಿರುವುದನ್ನೇ ಆಳವಡಿಸಿಕೊಳ್ಳಲು ಕೋರಿರುತ್ತಾರೆ.)

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.